CDSL

INVESTOR PROTECTION FUND TRUST

# ಆತ್ಮನಿರ್ಭರ್ ಇನ್ವೆಸ್ಟರ್‌ಗಳ ಸಬಲೀಕರಣ



ಆತ್ಮವಿಶ್ವಾಸಿ ಮತ್ತು ಆತ್ಮನಿರ್ಭರ್ ಇನ್ವೆಸ್ಟರ್‌ಗಳ
ರಾಷ್ಟ್ರದ ನಿರ್ಮಾಣ

CDSL
INVESTOR PROTECTION FUND TRUST

# ಆತ್ಮನಿರ್ಭರ್ ಇನ್ವೆಸ್ಟರ್‌ಗಳ ಸಬಲೀಕರಣ

ಸಿಡಿಎಸ್‌ಎಲ್‌ನ

**ಅನುಕೂಲಕರ** | **ವಿಶ್ವಾಸಾರ್ಹ** | **ಸುರಕ್ಷಿತ**

**ಡಿಮ್ಯಾಟ್ ಖಾತೆಗಳ ಜೊತೆಗೆ**

ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಎಂಬುದು ವಿಶ್ವಾಸಾರ್ಹ ಮತ್ತು ಸುರಕ್ಷಿತ ಡಿಜಿಟಲ್ ಸೇವೆಗಳೊಂದಿಗೆ ರಾಷ್ಟ್ರದಾದ್ಯಂತ ಇನ್ವೆಸ್ಟರ್‌ಗಳಿಗೆ ಬಲ ನೀಡಲು ಮೀಸಲಾದ ಭಾರತದ ಮೊದಲ ಮತ್ತು ಏಕೈಕ ಪಟ್ಟಿ ಮಾಡಲಾದ ಡೆಪಾಸಿಟರಿ ಆಗಿದೆ.



CDSL

INVESTOR PROTECTION FUND TRUST

ಆತ್ಮನಿರ್ಭರ್ ಇನ್ವೆಸ್ಟರ್ ಆಗಲು

# ಡಿಜಿಟಲ್ ಟೂಲ್‌ಕಿಟ್




ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# ಡಿಮ್ಯಾಟ್ ಖಾತೆಗಳು

'ಡಿಮ್ಯಾಟ್ ಖಾತೆ' (ಡಿಮೆಟೀರಿಯಲೈಸ್ಡ್ ಖಾತೆ) ಎಂಬುದು ಟ್ರೇಡಿಂಗ್ ಮತ್ತು ಹೂಡಿಕೆಗಳಲ್ಲಿ ಸಾಮಾನ್ಯವಾಗಿ ಬಳಸುವ ಪದವಾಗಿದೆ. ಇನ್ವೆಸ್ಟರ್‌ಗಳು ಸುರಕ್ಷಿತವಾಗಿ ಷೇರುಗಳನ್ನು ಹೊಂದುವ, ಟ್ರೇಡ್ ಮಾಡುವ ಮತ್ತು ಮೇಲ್ವಿಚಾರಣೆ ಮಾಡುವ ಎಲೆಕ್ಟ್ರಾನಿಕ್ ವಿಧಾನ ಇದಾಗಿದ್ದು, ಸುಗಮ ಮತ್ತು ದಕ್ಷ ಟ್ರಾನ್ಸಾಕ್ಷನ್‌ಗಳನ್ನು ಖಚಿತಪಡಿಸುತ್ತದೆ.

**ಇನ್ವೆಸ್ಟರ್‌ಗಳು ಡೆಪಾಸಿಟರಿಗೆ ದಾಖಲಾದ ಎಲ್ಲಾ ಸೆಕ್ಯೂರಿಟಿಗಳನ್ನು ತಮ್ಮ ಡಿಮ್ಯಾಟ್ ಅಕೌಂಟ್‌ನಲ್ಲಿ ಹೊಂದಿರಬಹುದು.**




**ಪಟ್ಟಿ ಮಾಡಲಾದ ಮತ್ತು ಪಟ್ಟಿ ಮಾಡದ ಸೆಕ್ಯೂರಿಟಿಗಳು**

INVESTOR PROTECTION FUND TRUST

# ನನಗೆ ಡಿಮ್ಯಾಟ್ ಖಾತೆ ಏಕೆ ಬೇಕು?

ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳು ಮತ್ತು ಸೆಕ್ಯೂರಿಟಿಗಳನ್ನು ಹಿಡಿದಿಡಲು ಸುರಕ್ಷಿತ ಮತ್ತು ಸುಲಭ ಮಾರ್ಗವಾಗಿ ಇದು,

- ವಂಚನೆ, ಕಳ್ಳತನ ಅಥವಾ ಕಾಗದ-ಆಧಾರಿತ ಸೆಕ್ಯೂರಿಟಿಗಳ ಹಾನಿಯಿಂದ ಉಂಟಾಗುವ ಅಪಾಯಗಳನ್ನು ನಿವಾರಿಸುತ್ತದೆ.

- ಎಲ್ಲರಿಗೂ ಒಂದೇ ಖಾತೆ
  - ಒಂದೇ ಖಾತೆಯ ಮೂಲಕ ನಿಮ್ಮ ಎಲ್ಲಾ ಹೂಡಿಕೆಗಳನ್ನು ಟ್ರ್ಯಾಕ್ ಮಾಡಿ.
  - ಆಡ್ ಲಾಟ್: ಒಂದು ಷೇರನ್ನು ಕೂಡಾ ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು.

- ವಹಿವಾಟು ಪ್ರಕ್ರಿಯೆ ಮತ್ತು ಸೆಟಲ್ಮೆಂಟ್‌ನ ವೆಚ್ಚ ಮತ್ತು ಸಮಯವನ್ನು ಕಡಿಮೆ ಮಾಡುತ್ತದೆ. ಯಾವುದೇ ಹೆಚ್ಚುವರಿ ಖರ್ಚು ಮಾಡದೆ ನೀವು ದೊಡ್ಡ ಪ್ರಮಾಣದ ಸೆಕ್ಯೂರಿಟಿಗಳನ್ನು ಸಮರ್ಥವಾಗಿ ಸಂಗ್ರಹಿಸಬಹುದು ಮತ್ತು ವಹಿವಾಟು ಮಾಡಬಹುದು.

- ಇತ್ತೀಚಿನ ಸೆಬಿ ಮಾರ್ಗಸೂಚಿಗಳ ಪ್ರಕಾರ, ನೀವು ಷೇರು ಪ್ರಮಾಣಪತ್ರಗಳಂತಹ ಸೆಕ್ಯೂರಿಟಿಗಳನ್ನು ಭೌತಿಕವಾಗಿ ಅಥವಾ ಡಿಮ್ಯಾಟ್ ಫಾರ್ಮ್‌ನಲ್ಲಿ ಹೊಂದುವ ಆಯ್ಕೆ ಮಾಡಬಹುದು. ಆದರೆ, ಏಪ್ರಿಲ್ 01, 2019 ರಿಂದ ಅನ್ವಯವಾಗುವಂತೆ, ಡಿಮ್ಯಾಟ್ ಫಾರ್ಮ್‌ನಲ್ಲಿ ಹೊಂದಿದ್ದರೆ ಮಾತ್ರ ಸೆಕ್ಯೂರಿಟಿಗಳನ್ನು ಟ್ರಾನ್ಸ್‌ಫರ್ ಮಾಡಬಹುದು.

- ಡಿವಿಡೆಂಡ್‌ಗಳು, ರಿಫಂಡ್‌ಗಳು ಅಥವಾ ಬಡ್ಡಿಯಂತಹ ಕಾರ್ಪೊರೇಟ್ ಕ್ರಮಗಳ ಪ್ರಯೋಜನಗಳು ಡಿಮ್ಯಾಟ್ ಖಾತೆದಾರರಿಗೆ ಆಟೋಮ್ಯಾಟಿಕ್ ಆಗಿ ಲಭ್ಯ ಇವೆ. ಬೋನಸ್ ಇಶ್ಯೂಗಳು, ರೈಟ್ ಷೇರುಗಳು ಅಥವಾ ಸ್ಟಾಕ್ ಸ್ಪ್ಲಿಟ್ ಅನ್ನು ಡಿಮ್ಯಾಟ್ ಖಾತೆಯಲ್ಲಿ ಆಟೋಮ್ಯಾಟಿಕ್ ಆಗಿ ಅಪ್‌ಡೇಟ್ ಮಾಡಲಾಗುತ್ತದೆ.

CDSL
INVESTOR PROTECTION FUND TRUST

# ಡಿಮ್ಯಾಟ್ ಖಾತೆ ನಂಬರ್

ಪ್ರತಿ ಡಿಮ್ಯಾಟ್ ಖಾತೆಯು ತನ್ನದೇ ಆದ ವಿಶಿಷ್ಟ 16 ಅಂಕಿಯ ಡಿಮ್ಯಾಟ್ ಖಾತೆ ನಂಬರ್ ಹೊಂದಿದ್ದು, ಇದನ್ನು ಫಲಾನುಭವಿ ಮಾಲೀಕರ ಐಡಿ ಅಥವಾ ಬಿಒ ಐಡಿ ಎಂದು ಕೂಡ ಕರೆಯಲಾಗುತ್ತದೆ.

ಸಿಡಿಎಸ್ಎಲ್ ಸಂದರ್ಭದಲ್ಲಿ, ಇದು ಡಿಪಿ ಐಡಿ (ಮೊದಲ 8 ಅಂಕಿಗಳು) ಮತ್ತು ಗ್ರಾಹಕ ಐಡಿ (ಕೊನೆಯ 8-ಅಂಕಿಗಳು) ಸಂಯೋಜನೆಯಾಗಿದೆ.

ಬಿಒ ಐಡಿಯು ನಂಬರ್‌ನಿಂದ ಆರಂಭವಾಗುತ್ತದೆ, ಅಂದರೆ

**12010000 00000001**

| 12010000 | 00000001 |
|---|---|
| ಡಿಪಿ ಐಡಿ | ಗ್ರಾಹಕ ಐಡಿ |

ನಿಮ್ಮ ಸಿಡಿಎಸ್ಎಲ್ ಡಿಮ್ಯಾಟ್ ಖಾತೆಯಲ್ಲಿ ನೀವು ಹೊಂದಬಹುದಾದ ಸೆಕ್ಯೂರಿಟಿಗಳ ಪಟ್ಟಿ:
ಪಟ್ಟಿ ನೋಡಲು ಇಲ್ಲಿ ಕ್ಲಿಕ್ ಮಾಡಿ
https://www.cdslindia.com/eservices/Investors/InvestorCorner

# ಡೆಪಾಸಿಟರಿ

ಡೆಪಾಸಿಟರಿಯು ಡಿಮೆಟೀರಿಯಲೈಸ್ಡ್ ರೂಪದಲ್ಲಿ ಸೆಕ್ಯೂರಿಟಿಗಳನ್ನು ಹಿಡಿದಿಡಲು ಸಹಾಯ ಮಾಡುತ್ತದೆ ಮತ್ತು ಸೆಕ್ಯೂರಿಟಿ ವಹಿವಾಟು ನಡೆಸಲು ನೆರವಾಗುತ್ತದೆ.

ಡೆಪಾಸಿಟರಿಯು ಸೆಕ್ಯೂರಿಟಿಗಳ ಬ್ಯಾಂಕ್ ಇದ್ದಂತೆ ಹಾಗೂ ಇದು ತಮ್ಮ ನೋಂದಾಯಿತ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ (ಡಿಪಿ) (ಬ್ಯಾಂಕ್‌ಗಳ ಶಾಖೆಗಳ ಹಾಗೆ) ಮೂಲಕ ಹೂಡಿಕೆದಾರರಿಗೆ ಡಿಮ್ಯಾಟ್ ಸೇವೆಗಳನ್ನು ಒದಗಿಸುತ್ತದೆ.

ಡೆಪಾಸಿಟರಿ ನೀಡುವ ಸೇವೆಗಳನ್ನು ಪಡೆಯಲು ಇನ್ವೆಸ್ಟರ್‌ಗಳು ನೋಂದಾಯಿತ ಡೆಪಾಸಿಟರಿ ಪಾರ್ಟಿಸಿಪೆಂಟ್ (ಡಿಪಿ) ಮೂಲಕ ಡಿಮ್ಯಾಟ್ ಖಾತೆ ತೆರೆಯಬೇಕು. ಡಿಪಿಗಳು ಇನ್ವೆಸ್ಟರ್‌ಗಳಿಗೆ ಡಿಮ್ಯಾಟ್ ಖಾತೆ ತೆರೆಯುವುದು ಮತ್ತು ನಿರ್ವಹಿಸುವುದು, ಷೇರುಗಳ ಡಿಮೆಟೀರಿಯಲೈಸೇಶನ್, ಷೇರುಗಳ ವರ್ಗಾವಣೆ, ಷೇರುಗಳನ್ನು ಅಡ ಇಡುವುದು, ಖಾತೆ ಸ್ಥಗಿತಗೊಳಿಸುವುದು ಮುಂತಾದ ಸೇವೆಗಳನ್ನು ಒದಗಿಸುತ್ತವೆ.

**ಡಿಪಿಗಳ ಪಟ್ಟಿ**
https://www.cdslindia.com/eservices/DP/DPlist

CDSL
INVESTOR PROTECTION FUND TRUST

# ಸಿಡಿಎಸ್‌ಎಲ್

ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು 1999 ರಲ್ಲಿ ಅನುಕೂಲಕರ, ವಿಶ್ವಾಸಾರ್ಹ ಮತ್ತು ಸುರಕ್ಷಿತ ಡೆಪಾಸಿಟರಿ ಸೇವೆಗಳನ್ನು ಒದಗಿಸುವ ಏಕೈಕ ಗುರಿಯೊಂದಿಗೆ ಸ್ಥಾಪಿಸಲಾಯಿತು. ಎರಡು ದಶಕಗಳ ನಂತರ, ನಾವು ಮಾಡಿದ ಎಲ್ಲಾ ಕೆಲಸಗಳು - ಅಂದರೆ, ನಾವು ನಿರ್ಮಿಸಿದ ಮೌಲ್ಯಗಳಿಂದ ಹಿಡಿದು ವಿವಿಧ ಅಸೆಟ್ ವರ್ಗಗಳ ಡಿಮೆಟೀರಿಯಲೈಸೇಶನ್ ಮತ್ತು ಇ-ಸೇವೆಗಳು ಕೈಗೆಟಕುವ ವೆಚ್ಚದಲ್ಲಿ ಈ ಗುರಿಯನ್ನು ಬೆಂಬಲಿಸಿವೆ.

ನಾವು ಮಾರುಕಟ್ಟೆ ಮೂಲಸೌಕರ್ಯ ಸಂಸ್ಥೆ (ಎಂಐಐ) ಆಗಿ ಬಂಡವಾಳ ಮಾರುಕಟ್ಟೆ ರಚನೆಯ ನಿರ್ಣಾಯಕ ಭಾಗವಾಗಿದ್ದು, ಮಾರುಕಟ್ಟೆಯಲ್ಲಿ ಭಾಗವಹಿಸುವ ಎಲ್ಲರಿಗೂ - ಅಂದರೆ ಎಕ್ಸ್‌ಚೇಂಜ್‌ಗಳು, ಕ್ಲಿಯರಿಂಗ್ ಕಾರ್ಪೊರೇಶನ್‌ಗಳು, ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು (ಡಿಪಿಗಳು), ಇಶ್ಯೂವರ್ ಮತ್ತು ಇನ್ವೆಸ್ಟರ್‌ಗಳಿಗೆ ಸೇವೆಗಳನ್ನು ಒದಗಿಸುತ್ತೇವೆ.

ಆರ್ಥಿಕವಾಗಿ ಸುರಕ್ಷಿತವಾದ ಭವಿಷ್ಯಕ್ಕೆ ನಿಮಗೆ ಮಾರ್ಗದರ್ಶನ ನೀಡುವ ಸಿಡಿಎಸ್‌ಎಲ್ ಸೇವೆಗಳೊಂದಿಗೆ **#AtmanirbharInvestor** ಆಗಲು ಆಯ್ಕೆ ಮಾಡಿ.

CDSL
INVESTOR PROTECTION FUND TRUST

# ಖಾತೆ ತೆರೆಯುವುದು

## ಸಿಡಿಎಸ್‌ಎಲ್ ಡಿಮ್ಯಾಟ್ ಖಾತೆ ತೆರೆಯುವುದು ಹೇಗೆ

ಸಿಡಿಎಸ್‌ಎಲ್‌ನ ಡೆಪಾಸಿಟರಿ ಪಾರ್ಟಿಸಿಪೆಂಟ್ (ಡಿಪಿ) ಅನ್ನು ಸಂಪರ್ಕಿಸಿ

ಅವು ಒದಗಿಸುವ ಸೇವೆಗಳು ಮತ್ತು ನಿಮ್ಮ ಅನುಕೂಲದ ಆಧಾರದ ಮೇಲೆ ಅವುಗಳನ್ನು ಆಯ್ಕೆಮಾಡಿ

ನಿಮ್ಮ ಕೆವೈಸಿ ವಿವರಗಳನ್ನು ಸಲ್ಲಿಸಿ:
- ಗುರುತಿನ ಪುರಾವೆ - ಪ್ಯಾನ್
- ವಿಳಾಸದ ಪುರಾವೆ - ಬ್ಯಾಂಕ್ ವಿವರಗಳು

ಕೆವೈಸಿ (ನಿಮ್ಮ ಗ್ರಾಹಕರನ್ನು ತಿಳಿಯಿರಿ) ಪ್ರಕ್ರಿಯೆಗಾಗಿ ಹೆಚ್ಚುವರಿ ಡಾಕ್ಯುಮೆಂಟ್‌ಗಳನ್ನು ಒದಗಿಸಿ. ಅನುಕೂಲಕರ, ವಿಶ್ವಾಸಾರ್ಹ ಮತ್ತು ನೋಂದಾಯಿತ ಡಿಪಿ ಮೂಲಕ ಡಿಮ್ಯಾಟ್ ಖಾತೆ ತೆರೆದು, ಹೂಡಿಕೆಯ ಅಪಾಯಗಳನ್ನು ಕಡಿಮೆ ಮಾಡಿ.

ಸಿಡಿಎಸ್‌ಎಲ್ ಡಿಪಿಗಳ ಪಟ್ಟಿ:
https://www.cdslindia.com/eservices/DP/DPlist

ಒಮ್ಮೆ ನೀವು ನಿಮ್ಮ ಆಯ್ಕೆ ಮಾಡಿದ ನಂತರ, ನೀವು ಆರಿಸಿದ ಡಿಪಿಯ ಮಾಹಿತಿ ಪುಟಕ್ಕೆ ನೀವು ಹೋಗುತ್ತೀರಿ. ಈ ಪುಟವು ಡಿಪಿ ಮತ್ತು ಸೇವಾ ಕೇಂದ್ರಗಳ ಟ್ಯಾರಿಫ್ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತದೆ. ಡಿಪಿ ಟ್ಯಾರಿಫ್ ರಚನೆಗಳನ್ನು ಹೋಲಿಕೆ ಮಾಡುವ ಮೂಲಕ ಮಾಹಿತಿಯುಕ್ತ ನಿರ್ಧಾರವನ್ನು ತೆಗೆದುಕೊಳ್ಳಿ.

CDSL
INVESTOR PROTECTION FUND TRUST

# ಖಾತೆ ತೆರೆಯುವುದು

ಆಗಿರಿ #AtmanirbharInvestor




## ಮಾಡಬೇಕಾದ ಕೆಲಸಗಳು

- ಸಹಿ ಮಾಡುವ ಮೊದಲು ಖಾತೆ ತೆರೆಯುವ ಫಾರ್ಮ್ ಅನ್ನು ಎಚ್ಚರಿಕೆಯಿಂದ ಓದಿ.
- ಅಲರ್ಟ್‌ಗಳನ್ನು ಪಡೆಯಲು, ಡಿಮ್ಯಾಟ್ ಖಾತೆ ತೆರೆಯುವಾಗ ನಿಮ್ಮ ಸ್ವಂತ ಇಮೇಲ್ ಐಡಿ ಮತ್ತು ಮೊಬೈಲ್ ನಂಬರ್ ನೊಂದಿಗೆ ನೋಂದಣಿ ಮಾಡಿ.
- ಬ್ಯಾಂಕ್ ವಿವರಗಳನ್ನು ಸರಿಯಾಗಿ ಅಪ್ಡೇಟ್ ಮಾಡಲಾಗಿದೆ ಮತ್ತು ನಿಮ್ಮ ಡಿಮ್ಯಾಟ್ ಖಾತೆಗೆ ಲಿಂಕ್ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ (ಡಿವಿಡೆಂಡ್‌ಗಳು ಮತ್ತು ರಿಡೆಂಪ್ಶನ್‌ಗಳನ್ನು ನೇರವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಕ್ರೆಡಿಟ್ ಮಾಡಲಾಗುತ್ತದೆ).

## ಮಾಡಬಾರದ ಕೆಲಸಗಳು

- ನೋಂದಣಿ ಮಾಡಿಕೊಳ್ಳದ ಮಧ್ಯಸ್ಥಗಾರರೊಂದಿಗೆ ವ್ಯವಹರಿಸಬೇಡಿ.
- ಯಾರೊಂದಿಗೂ ನಿಮ್ಮ ಡಿಮ್ಯಾಟ್ ಖಾತೆಯ ಕ್ರೆಡೆನ್ಶಿಯಲ್ ಗಳನ್ನು (ಪಾಸ್‌ವರ್ಡ್) ಹಂಚಿಕೊಳ್ಳಬೇಡಿ.
- ಡಿಮ್ಯಾಟ್ ಶುಲ್ಕಗಳಿಗೆ ನಗದು ಪಾವತಿಯನ್ನು ತಪ್ಪಿಸಿ. ಭವಿಷ್ಯದ ವಿವಾದಗಳ ಸಂದರ್ಭದಲ್ಲಿ ವಹಿವಾಟುಗಳನ್ನು ಗುರುತಿಸಲು ಚೆಕ್, ಇಂಟರ್ನೆಟ್ ಬ್ಯಾಂಕಿಂಗ್‌ನಂತಹ ಪರ್ಯಾಯ ವಿಧಾನಗಳನ್ನು ಆಯ್ಕೆಮಾಡಿ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# ನಾಮಿನೇಶನ್

## ಆಗಿರಿ #AtmanirbharInvestor



### ಮಾಡಬೇಕಾದ ಕೆಲಸಗಳು

- ನಿಮ್ಮ ಡಿಮ್ಯಾಟ್ ಖಾತೆಗೆ ಯಾವಾಗಲೂ ನಾಮಿನಿ/ಗಳನ್ನು ನೇಮಿಸಿ.
- ವೈಯಕ್ತಿಕ ಖಾತೆದಾರರು ಮಾತ್ರ ನಾಮಿನೇಟ್ ಮಾಡಬಹುದು.
- ಖಾತೆಯು ಕಾರ್ಯ ನಿರ್ವಹಿಸುವವರೆಗೆ ನೀವು ನಾಮಿನಿಯನ್ನು ಸೇರಿಸಬಹುದು/ಬದಲಾಯಿಸಬಹುದು.
- ಏಕೈಕ/ಜಂಟಿ ಹೋಲ್ಡರ್‌ಗಳು ನಾಮಿನಿಯನ್ನು/ಗಳನ್ನು ನೇಮಿಸಬಹುದು.
- ಡಿಮ್ಯಾಟ್ ಖಾತೆಗೆ ನೀವು ಗರಿಷ್ಠ 3 ನಾಮಿನಿಗಳನ್ನು ಹೊಂದಬಹುದು.
- ಪಾಲಕರ ಪ್ರಾತಿನಿಧ್ಯದಲ್ಲಿ ಅಪ್ರಾಪ್ತರನ್ನು ನಾಮಿನಿಯಾಗಿ ನೇಮಿಸಬಹುದು.

### ಮಾಡಬಾರದ ಕೆಲಸಗಳು

- ವ್ಯಕ್ತಿಗಳಲ್ಲದವರು ನಾಮಿನೇಟ್ ಮಾಡುವಂತಿಲ್ಲ ಅಥವಾ ನಾಮಿನಿ ಆಗಿ ನೇಮಕಗೊಳ್ಳುವಂತಿಲ್ಲ.
- ಪಿಒಎ ಹೋಲ್ಡರ್‌ಗಳು ನಾಮಿನಿಯನ್ನು ಸೇರಿಸಲು/ಬದಲಾಯಿಸಲು ಸಾಧ್ಯವಿಲ್ಲ.
- ಅಪ್ರಾಪ್ತ ಖಾತೆದಾರರು ನಾಮಿನಿ/ಗಳನ್ನು ನೇಮಿಸಲು ಸಾಧ್ಯವಿಲ್ಲ.
- ಏಕೈಕ/ಜಂಟಿ ಹೋಲ್ಡರ್‌ಗಳು ನಾಮಿನಿ/ಗಳಾಗಿ ತಮ್ಮನ್ನು ತಾವೇ ನಾಮಿನೇಟ್ ಮಾಡಲು ಸಾಧ್ಯವಿಲ್ಲ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL

INVESTOR PROTECTION FUND TRUST

# ಡಿಮ್ಯಾಟ್ ಡೆಬಿಟ್ ಮತ್ತು ಅಡಮಾನದ ಸೂಚನೆ (ಡಿಡಿಪಿಐ)

## ಆಗಿರಿ #AtmanirbharInvestor



ಡಿಡಿಪಿಐ ಐಚ್ಛಿಕ ಡಾಕ್ಯುಮೆಂಟ್ ಆಗಿದ್ದು, ಪೇ-ಇನ್ ಜವಾಬ್ದಾರಿಗಳನ್ನು ಪೂರೈಸುವ ಮತ್ತು ಬಿಒ ಕಾರ್ಯಗತಗೊಳಿಸಿದ ಟ್ರೇಡ್‌ಗಳನ್ನು ಸೆಟಲ್ಮೆಂಟ್ ಮಾಡುವ ಸೀಮಿತ ಉದ್ದೇಶಕ್ಕಾಗಿ ಡಿಮ್ಯಾಟ್ ಖಾತೆಯನ್ನು ಅಕ್ಸೆಸ್ ಮಾಡಲು ಸ್ಟಾಕ್ ಬ್ರೋಕರ್/ಡೆಪಾಸಿಟರಿ ಪಾರ್ಟಿಸಿಪೆಂಟ್‌ಗೆ ಅಧಿಕಾರ ನೀಡುತ್ತದೆ.

ಪಿಒಎ ಉದ್ದೇಶವನ್ನೇ ಡಿಡಿಪಿಐ ಪೂರೈಸುತ್ತದೆ ಮತ್ತು ಪಿಒಎ ದುರುಪಯೋಗವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.

ಡಿಡಿಪಿಐ ಅನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಬಳಸಬಹುದು:

- ನೀವು ಟ್ರೇಡ್ ಮಾಡಿದ ಸ್ಟಾಕ್‌ಗಳನ್ನು ಪೇ-ಇನ್‌ಗಾಗಿ ನಿಮ್ಮ ಬ್ರೋಕರ್ ಡೆಬಿಟ್ ಮಾಡಬಹುದು.
- ಮಾರ್ಜಿನ್‌ಗಾಗಿ ಷೇರುಗಳನ್ನು ಅಡ ಇಡಬಹುದು.
- ನೀವು ಬೈಬ್ಯಾಕ್‌ನಲ್ಲಿ ಭಾಗವಹಿಸಿದರೆ ಮ್ಯೂಚುಯಲ್ ಫಂಡ್ ಯುನಿಟ್‌ಗಳನ್ನು
- ರಿಡೀಮ್ ಮಾಡಬಹುದು ಅಥವಾ ಷೇರುಗಳನ್ನು ಡೆಬಿಟ್ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# SMART ಸೌಲಭ್ಯ
## (ಎಸ್‌ಎಂಎಸ್ ಅಲರ್ಟ್ಸ್ ರಿಲೇಟೆಡ್ ಟು ಟ್ರಾನ್ಸಾಕ್ಷನ್ಸ್)

ಆಗಿರಿ #AtmanirbharInvestor




## ಮಾಡಬೇಕಾದ ಕೆಲಸಗಳು

- ಯಾವಾಗಲೂ ನಿಮ್ಮ ಸಿಡಿಎಸ್‌ಎಲ್ ಡಿಮ್ಯಾಟ್ ಖಾತೆಯಲ್ಲಿ ನಿಮ್ಮ ಮೊಬೈಲ್ ನಂಬರ್ ಅಪ್‌ಡೇಟ್ ಮಾಡಿ.
- ಡೆಬಿಟ್‌ಗಳು ಮತ್ತು ಕಾರ್ಪೊರೇಟ್ ಆ್ಯಕ್ಷನ್ ಕ್ರೆಡಿಟ್‌ಗಳಿಗಾಗಿ ಎಸ್‌ಎಂಎಸ್ ಅಲರ್ಟ್‌ಗಳನ್ನು ಪಡೆಯಲು ಅನುವು ಮಾಡಿಕೊಡುವ ಸಿಡಿಎಸ್‌ಎಲ್‌ನ "SMART" ಸೌಲಭ್ಯಕ್ಕೆ ನೋಂದಾಯಿಸಿ.
- ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಆಫ್-ಮಾರ್ಕೆಟ್ ಅಥವಾ ಮಾರ್ಜಿನ್ ಪ್ಲೆಡ್ಜ್ ವಹಿವಾಟುಗಳ ಸಂದರ್ಭದಲ್ಲಿ ಒಟಿಪಿಗಾಗಿ ನಿಮ್ಮ ಮೊಬೈಲ್ ಮೆಸೇಜ್‌ಗಳನ್ನು (ಎಸ್‌ಎಂಎಸ್) ನೋಡಿ.

## ಮಾಡಬಾರದ ಕೆಲಸಗಳು

- ಮೊಬೈಲ್ ನಂಬರ್ ಬದಲಾಯಿಸಿದ ಸಂದರ್ಭದಲ್ಲಿ ನಿಮ್ಮ ಡಿಮ್ಯಾಟ್ ಖಾತೆಯನ್ನು ಅಪ್‌ಡೇಟ್ ಮಾಡಲು ಮರೆಯಬೇಡಿ.
- ಡಿಮ್ಯಾಟ್ ಖಾತೆ ಟ್ರಾನ್ಸಾಕ್ಷನ್‌ಗಳಿಗೆ ಒಟಿಪಿಗಳನ್ನು ಎಂದಿಗೂ ಶೇರ್ ಅಥವಾ ಫಾರ್ವರ್ಡ್ ಮಾಡಬೇಡಿ.
- ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಮಾಡಲಾದ ಅನಧಿಕೃತ ಡೆಬಿಟ್‌ಗಳಿಗೆ ಸಂಬಂಧಿಸಿದ ಸಿಡಿಎಸ್‌ಎಲ್‌ನ ಯಾವುದೇ ಎಸ್‌ಎಂಎಸ್ ಅಲರ್ಟ್‌ಗಳನ್ನು ನಿರ್ಲಕ್ಷಿಸಬೇಡಿ ಮತ್ತು ತಕ್ಷಣವೇ ನಿಮ್ಮ ಡಿಪಿಯನ್ನು ಸಂಪರ್ಕಿಸಿ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# ನಿಮ್ಮ ಸಿಡಿಎಸ್‌ಎಲ್ ಡಿಮ್ಯಾಟ್ ಖಾತೆ ವಿವರಗಳನ್ನು ಅಪ್‌ಡೇಟ್ ಮಾಡಿ

ಆಗಿರಿ #AtmanirbharInvestor



## ಮಾಡಬೇಕಾದ ಕೆಲಸಗಳು

- ವಿಳಾಸ ಅಥವಾ ಬ್ಯಾಂಕ್ ಖಾತೆ ವಿವರಗಳಲ್ಲಿನ ಬದಲಾವಣೆಯನ್ನು ತಕ್ಷಣವೇ ನಿಮ್ಮ ಡಿಪಿಗೆ ತಿಳಿಸಿ.
- ನಿಮ್ಮ ಇತ್ತೀಚಿನ ಇಮೇಲ್ ಐಡಿ ಮತ್ತು ಮೊಬೈಲ್ ನಂಬರ್ ನೊಂದಿಗೆ ಯಾವಾಗಲೂ ನಿಮ್ಮ ಸಿಡಿಎಸ್‌ಎಲ್ ಡಿಮ್ಯಾಟ್ ಖಾತೆಯನ್ನು ಅಪ್ಡೇಟ್ ಆಗಿರಿಸಿ.
- ಇಶ್ಯೂವರ್‌ಗಳು/ಆರ್‌ಟಿಎಗಳೊಂದಿಗೆ ನಿಮ್ಮ ಇಮೇಲ್ ಐಡಿಯನ್ನು ಹಂಚಿಕೊಳ್ಳಲು ಮತ್ತು ಇಮೇಲ್‌ನಲ್ಲಿ ಇ-ನೋಟೀಸ್‌ಗಳು, ವಾರ್ಷಿಕ ವರದಿಗಳನ್ನು ತ್ವರಿತವಾಗಿ ಪಡೆಯಲು ಒಪ್ಪಿಕೊಳ್ಳುವ ಮೂಲಕ ಪರಿಸರ ಪ್ರೇಮಿ ಆಗಿರಿ.

## ಮಾಡಬಾರದ ಕೆಲಸಗಳು

- ನಿಮ್ಮ ಅಪ್‌ಡೇಟ್ ಆದ ಇಮೇಲ್ ಐಡಿ ಅಥವಾ ಮೊಬೈಲ್ ಫೋನ್ ನಂಬರ್‌ಗಳಲ್ಲಿ ನೀವು ವಹಿವಾಟಿನ ಸ್ಟೇಟ್ಮೆಂಟ್ ಗಳು/ಎಸ್‌ಎಂಎಸ್ ಅಲರ್ಟ್‌ಗಳನ್ನು ಪಡೆಯದಿದ್ದರೆ ನಿಮ್ಮ ಡಿಪಿಯನ್ನು ಸಂಪರ್ಕಿಸಲು ವಿಳಂಬ ಮಾಡಬೇಡಿ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

easi

'easi' (ಎಲೆಕ್ಟ್ರಾನಿಕ್ ಅಕ್ಸೆಸ್ ಟು ಸೆಕ್ಯೂರಿಟೀಸ್ ಇನ್ಫರ್ಮೇಶನ್) ಎಂಬುದು ಕಳೆದ 30 ದಿನಗಳ ಮತ್ತು ಒಂದು ಹಣಕಾಸು ವರ್ಷದ (365 ದಿನಗಳು) ವಹಿವಾಟು ಮತ್ತು ಹಿಸ್ಟರಿ ಸ್ಟೇಟ್ಮೆಂಟ್‌ಗಳನ್ನು ನೋಡಲು ಹಾಗೂ ಪ್ರಿಂಟ್ ಮಾಡಲು ಇರುವ ಇಂಟರ್ನೆಟ್-ಆಧಾರಿತ ಸೌಲಭ್ಯವಾಗಿದೆ.

- ನಿಮ್ಮ ಡಿಮ್ಯಾಟ್ ಖಾತೆ ಪರಿಶೀಲಿಸಿ ಮತ್ತು ಪ್ರೊಫೈಲ್ ಎಡಿಟ್ ಮಾಡಿ.
- ವಹಿವಾಟು, ಹೋಲ್ಡಿಂಗ್‌ಗಳು ಮತ್ತು ಹಿಂದಿನ ಹಣಕಾಸು ವರ್ಷಗಳ ಸ್ಟೇಟ್ಮೆಂಟ್‌ಗಳನ್ನು ನೋಡಿ ಹಾಗೂ ಪ್ರಿಂಟ್ ಮಾಡಿ.
- ಇತ್ತೀಚಿನ ಮೌಲ್ಯಮಾಪನದೊಂದಿಗೆ ಅಪ್ಡೇಟ್ ಆಗಿರಿ.
- ಒಂದೇ ಲಾಗಿನ್ ಐಡಿ ಮೂಲಕ ಅನೇಕ ಡಿಮ್ಯಾಟ್ ಖಾತೆಗಳನ್ನು ನೋಡಿ.
- ಕನ್ಸಾಲಿಡೇಟೆಡ್ ಅಕೌಂಟ್ ಸ್ಟೇಟ್ಮೆಂಟ್ (ಸಿಎಎಸ್) ಗಳಿಗೆ ಅಕ್ಸೆಸ್.
- ಇ-ಡಾಕ್ಯುಮೆಂಟ್‌ಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು ಮತ್ತು ಶೇರ್ ಮಾಡಲು ಇ-ಲಾಕರ್ ಸೌಲಭ್ಯ ಪಡೆಯಿರಿ.
- ಕಾರ್ಪೋರೇಟ್ ಘೋಷಣೆಗಳ ಮೇಲ್ವಿಚಾರಣೆ - ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಇಲ್ಲದ 25 ಐಎಸ್‌ಐಎನ್‌ವರೆಗೆ ಸೇರಿಸುವ ಆಯ್ಕೆ.

MyEasi ಇಲ್ಲಿ ಲಭ್ಯವಿರುವ Myeasi ಮೊಬೈಲ್ ಆ್ಯಪ್ ಡೌನ್ಲೋಡ್ ಮಾಡಿ: GET IT ON Google Play | Download on the App Store

https://web.cdslindia.com/myeasitoken/Home/Login

CDSL
INVESTOR PROTECTION FUND TRUST

# easiest

easiest (ಎಲೆಕ್ಟ್ರಾನಿಕ್ ಅಕ್ಸೆಸ್ ಟು ಸೆಕ್ಯೂರಿಟೀಸ್ ಇನ್ಫರ್ಮೇಶನ್ ಆ್ಯಂಡ್ ಎಕ್ಸಿಕ್ಯೂಶನ್ ಆಫ್ ಸೆಕ್ಯೂರ್ಡ್ ಟ್ರಾನ್ಸಾಕ್ಷನ್ಸ್) ಎಂಬುದು ಮೇಲ್ವಿಚಾರಣೆ ಮತ್ತು ವಹಿವಾಟಿಗಾಗಿ ಸಿಡಿಎಸ್‌ಎಲ್ ಒದಗಿಸುವ ಇಂಟರ್ ನೆಟ್-ಆಧಾರಿತ ಸೌಲಭ್ಯವಾಗಿದೆ.

- easi ಯ ಎಲ್ಲಾ ಸೌಲಭ್ಯಗಳು ಮತ್ತು ಪ್ರಯೋಜನಗಳು.
- easi ಮತ್ತು easiest ಬಳಕೆದಾರರಿಗೆ ಸಿಡಿಎಸ್‌ಎಲ್‌ನ Myeasi ಆ್ಯಪ್‌ನೊಂದಿಗೆ ಸರಾಗವಾದ ಅಕ್ಸೆಸ್.
- ವಹಿವಾಟುಗಳನ್ನು ಮಾನಿಟರ್ | ಸೆಟ್ | ಫ್ರೀಝ್ | ಅನ್‌ಫ್ರೀಝ್ ಮಾಡಿ.
- ಬಿಒಗಳಿಂದ ಸೂಚನೆಗಳನ್ನು ಸಲ್ಲಿಸಲು ಅನುಕೂಲ ಮಾಡುತ್ತದೆ.
- ನೀವು ಈಗಾಗಲೇ easi ಸದಸ್ಯರೇ? easiest ಗೆ ಅಪ್‌ಗ್ರೇಡ್ ಮಾಡಿ.

## easiest ನಲ್ಲಿ ಲಭ್ಯವಿರುವ ಎರಡು ರೀತಿಯ ಖಾತೆ ಟ್ರಾನ್ಸ್‌ಫರ್‌ಗಳು

- **ವಿಶ್ವಾಸಾರ್ಹ ಖಾತೆ ಟ್ರಾನ್ಸ್‌ಫರ್‌ಗಳು:**
  ಬಿಒ ಖಾತೆಯಿಂದ ಬಿಒ ಆಯ್ಕೆಯ ಯಾವುದೇ 4 ಪೂರ್ವ-ಸೂಚಿತ ಸಿಡಿಎಸ್‌ಎಲ್ ಡಿಮ್ಯಾಟ್ ಖಾತೆಗಳಿಗೆ ಸೆಕ್ಯೂರಿಟಿಗಳ ವರ್ಗಾವಣೆ.
- **ನಿಮ್ಮ ಆಯ್ಕೆಯ ಖಾತೆ - ಟ್ರಾನ್ಸ್‌ಫರ್‌ಗಳು:**
  ಬಿಒ ಖಾತೆಯಿಂದ, ಸಿಎಂ ಸೆಟಲ್‌ಮೆಂಟ್ ಖಾತೆಗಳನ್ನು ಒಳಗೊಂಡಂತೆ ಇತರ ಯಾವುದೇ ಡಿಮ್ಯಾಟ್ ಖಾತೆಗೆ ಡಿಜಿಟಲ್ ಸಹಿಯ ಮೂಲಕ ಸೆಕ್ಯೂರಿಟಿಗಳನ್ನು ಟ್ರಾನ್ಸ್ ಫರ್ ಮಾಡಲು ಅನುಮತಿ ನೀಡುತ್ತದೆ.

---

ಸಿಡಿಎಸ್‌ಎಲ್‌ನ EASIEST ಸೌಲಭ್ಯದೊಂದಿಗೆ ಸುರಕ್ಷಿತವಾಗಿ ಪರಿಶೀಲಿಸಿ ಮತ್ತು ವಹಿವಾಟು ನಡೆಸಿ:

https://web.cdslindia.com/myeasitoken/Home/Login

CDSL
INVESTOR PROTECTION FUND TRUST

# ಡೆಲಿವರಿ ಸೂಚನೆ ಸ್ಲಿಪ್ (ಡಿಐಎಸ್)

ಆಗಿರಿ #AtmanirbharInvestor



## ಮಾಡಬೇಕಾದ ಕೆಲಸಗಳು

- ರಿಕ್ವಿಸಿಶನ್ ಸ್ಲಿಪ್ ಮತ್ತು ಸ್ಲಿಪ್‌ಗಳ ಸೀರಿಯಲ್ ನಂಬರ್ ಆರ್ಡರ್ ಅನ್ನು ನಿರ್ವಹಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಸ್ಲಿಪ್‌ನಲ್ಲಿ ಯಾವುದೇ ಖಾಲಿ ಜಾಗವಿದ್ದರೆ ಅದರ ಮೇಲೆ ಗೆರೆ ಎಳೆಯಿರಿ.
- ಯಾವಾಗಲೂ ಡಿಐಎಸ್ ಬುಕ್ ಅನ್ನು ಸುರಕ್ಷಿತವಾಗಿಡಿ.
- ಎಲ್ಲಾ ಆಫ್ ಮಾರ್ಕೆಟ್ ಟ್ರಾನ್ಸಾಕ್ಷನ್‌ಗಳಿಗೆ ಕಾರಣ, ಪರಿಗಣನೆ ಮೊತ್ತ ಮತ್ತು ಪರಿಗಣನೆಯ ವಿವರಗಳನ್ನು ನಮೂದಿಸಿ.

## ಮಾಡಬಾರದ ಕೆಲಸಗಳು

- ಪ್ರತಿ ಸ್ಲಿಪ್‌ನಲ್ಲಿ ಸೀರಿಯಲ್ ನಂಬರ್ ಜೊತೆಗೆ ನಿಮ್ಮ ಡಿಮ್ಯಾಟ್ ಖಾತೆ ನಂಬರ್ ಮುಂಚಿತವಾಗಿ ಪ್ರಿಂಟ್ ಆಗಿರದಿದ್ದರೆ, ಡಿಪಿಯಿಂದ ಡಿಐಎಸ್ ಬುಕ್ ಸ್ವೀಕರಿಸಬೇಡಿ.
- ಡೆಲಿವರಿ ಸೂಚನೆ ಸ್ಲಿಪ್ ಎಂಬುದು ಬೇರರ್ ಚೆಕ್‌ಗೆ ಸಮನಾಗಿರುವುದರಿಂದ, ನಿಮ್ಮ ಸಹಿ ಮಾಡಿದ ಡೆಲಿವರಿ ಸೂಚನೆ ಸ್ಲಿಪ್ ಅನ್ನು ಯಾರ ಕೈಗೂ ಕೊಡಬೇಡಿ.

(ಡಿಐಎಸ್ ಎಂಬುದು ನಿಮ್ಮ ಡಿಮ್ಯಾಟ್ ಖಾತೆಯ ಚೆಕ್ ಬುಕ್ ಇದ್ದಂತೆ)

CDSL
INVESTOR PROTECTION FUND TRUST

# e-Voting

ಸಿಡಿಎಸ್‌ಎಲ್‌ನ ಇ-ವೋಟಿಂಗ್ ವ್ಯವಸ್ಥೆಯು, ಷೇರುದಾರರು/ಸದಸ್ಯರಿಗೆ ಇ-ವೋಟಿಂಗ್ ಕಾರ್ಯಕ್ರಮವು ಮುಗಿಯುವವರೆಗೆ ಕಂಪನಿಯ ನಿರ್ಣಯಗಳ ಆಧಾರದಲ್ಲಿ ದೂರದಿಂದಲೇ ತಮ್ಮ ಎಲೆಕ್ಟ್ರಾನಿಕ್ ಮತಗಳನ್ನು ಚಲಾಯಿಸಲು ಅನುವು ಮಾಡಿಕೊಡುತ್ತದೆ.

ಎಜಿಎಂ/ಇಜಿಎಂ ನಡೆಯುವ ಮುಂಚೆ ಅಥವಾ ನಡೆಯುವಾಗ ಷೇರುದಾರರು www.evotingindia.com ನಲ್ಲಿ ತಮ್ಮ ಮತ ಚಲಾಯಿಸಬಹುದು.

ನಿಮ್ಮ ಅನುಕೂಲಕ್ಕೆ ತಕ್ಕ ಸ್ಥಳ ಮತ್ತು ಸಮಯದಲ್ಲಿ ಕಾರ್ಪೊರೇಟ್ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸಿ.

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) ಅಥವಾ ಇತರ ಆಡಿಯೋ ವಿಶ್ಯುಯಲ್ ವಿಧಾನಗಳ (ಒಎವಿಎಂ) ಮೂಲಕ ಎಜಿಎಂ/ಇಜಿಎಂನಲ್ಲಿ ಭಾಗವಹಿಸಿ.

ನಿಮ್ಮ ಡಿಪಿಯ ಆನ್‌ಲೈನ್ ಪೋರ್ಟಲ್‌ನಿಂದ ಅಥವಾ ಡೆಪಾಸಿಟರಿ ವೆಬ್‌ಸೈಟ್ ನಲ್ಲಿ ಇ-ವೋಟಿಂಗ್ ಟ್ಯಾಬ್ ಮೇಲೆ ಕ್ಲಿಕ್ ಮಾಡುವ ಮೂಲಕ ನೀವು ಇ-ವೋಟಿಂಗ್ ಮಾಡಬಹುದು.

INVESTOR PROTECTION FUND TRUST

# ಡಿಮೆಟೀರಿಯಲೈಸೇಶನ್ (ಡಿಮ್ಯಾಟ್)

ಆಗಿರಿ #AtmanirbharInvestor




## ಮಾಡಬೇಕಾದ ಕೆಲಸಗಳು

- ಇವುಗಳಿಗೆ ಯಾವಾಗಲೂ ಪ್ರತ್ಯೇಕ ಡಿಮ್ಯಾಟ್ ಕೋರಿಕೆ ಫಾರ್ಮ್ (ಡಿಆರ್ಎಫ್) ಭರ್ತಿ ಮಾಡಿ:,

  i. ಮುಕ್ತ ಮತ್ತು ಲಾಕ್ಡ್-ಇನ್ ಸೆಕ್ಯೂರಿಟಿಗಳು,
  ii. ಪ್ರತಿ ಐಎಸ್ಐಎನ್,
  iii. ವಿವಿಧ ಕಾರಣಗಳಿಗಾಗಿ ಲಾಕ್ಡ್-ಇನ್ ಆದ ಸೆಕ್ಯೂರಿಟಿಗಳು,
  iv. ವಿವಿಧ ಪೇಯ್ಡ್-ಅಪ್ ಮೌಲ್ಯಗಳ ಸೆಕ್ಯೂರಿಟಿಗಳು ಮತ್ತು
  v. ಪ್ರತಿ ಕ್ಲೈಂಟ್ ಖಾತೆಗೆ.

- ಎಲ್ಲಾ ಡಿಮ್ಯಾಟ್ ಖಾತೆದಾರರು ಡಿಪಿ ಮತ್ತು ಇಶ್ಯೂವರ್/ಆರ್‌ಟಿಎ ಜೊತೆಗೆ ರೆಕಾರ್ಡ್ ಮಾಡಿದ ಮಾದರಿ ಸಹಿ(ಗಳ) ಪ್ರಕಾರ ಡಿಆರ್ಎಫ್‌ಗೆ ಸಹಿ ಮಾಡುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

## ಮಾಡಬಾರದ ಕೆಲಸಗಳು

- ಡಿಮ್ಯಾಟ್‌ಗಾಗಿ ಸೆಕ್ಯೂರಿಟಿಗಳನ್ನು ಕಳುಹಿಸುವ ಮೊದಲು, ಕಳುಹಿಸುತ್ತಿರುವ ಸೆಕ್ಯೂರಿಟಿಗಳ ವಿಶಿಷ್ಟ ಸಂಖ್ಯೆಗಳನ್ನು ರೆಕಾರ್ಡ್ ಮಾಡಲು ಮರೆಯಬೇಡಿ.
- ಡಿಮ್ಯಾಟ್‌ಗಾಗಿ ಕೋರಿಕೆ ಸಲ್ಲಿಸುವ ಮೊದಲು ಐಎಸ್ಐಎನ್ ಸಕ್ರಿಯವಾಗಿದೆಯೇ ಎಂದು ಡಬಲ್-ಚೆಕ್ ಮಾಡಲು ಮರೆಯಬೇಡಿ.
- ಡಿಮ್ಯಾಟ್‌ಗೆ ಕಳುಹಿಸುವ ಮೊದಲು, ಈ ಕಂಪನಿಯ ಹೆಸರು ಬಾಕಿ ಇರುವ ಡಿಮ್ಯಾಟ್ ಕೋರಿಕೆಗಳನ್ನು ಹೊಂದಿರುವ ಟಾಪ್ 200 ಕಂಪನಿಗಳ ಪಟ್ಟಿಯಲ್ಲಿದೆಯೇ ಎಂದು ಪರಿಶೀಲಿಸಲು ಮರೆಯಬೇಡಿ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# eCAS

ಸಿಡಿಎಸ್‌ಎಲ್‌ನ ಕನ್ಸಾಲಿಡೇಟೆಡ್ ಅಕೌಂಟ್ ಸ್ಟೇಟ್ಮೆಂಟ್ (ಸಿಎಎಸ್) ಎಂಬುದು ಇನ್ವೆಸ್ಟರ್‌ನ ಎಲ್ಲಾ ಹಣಕಾಸಿನ ಸೆಕ್ಯೂರಿಟಿಗಳ ಒಟ್ಟುಗೂಡಿಸಿದ ಚಿತ್ರಣವನ್ನು ಒದಗಿಸುತ್ತದೆ, ಅಂದರೆ ಸಿಡಿಎಸ್‌ಎಲ್ ಮತ್ತು ಎನ್‌ಎಸ್‌ಡಿಎಲ್ (ಡೆಪಾಸಿಟರಿಗಳು) ಮತ್ತು ಮ್ಯೂಚುಯಲ್ ಫಂಡ್‌ಗಳ (ಎಂಎಫ್) ಜೊತೆಗಿನ ಸ್ಟೇಟ್ಮೆಂಟ್ ಆಫ್ ಅಕೌಂಟ್ (ಎಸ್‌ಒಎ) ಫಾರ್ಮ್‌ನಲ್ಲಿ ಇರುವ ಡಿಮ್ಯಾಟ್ ಖಾತೆಯಲ್ಲಿನ ವಹಿವಾಟುಗಳು ಮತ್ತು ಹೋಲ್ಡಿಂಗ್‌ಗಳ ಒಂದೇ ಖಾತೆ ಸ್ಟೇಟ್ಮೆಂಟ್ ಅನ್ನು ಒದಗಿಸುತ್ತದೆ.

- ಡಿಮ್ಯಾಟ್ ಮತ್ತು ಎಂಎಫ್‌ನಲ್ಲಿ ಹೂಡಿಕೆಗಳ ಒಟ್ಟುಗೂಡಿಸಿದ ಚಿತ್ರಣ.
- ಯಾವುದೇ ವಹಿವಾಟು ಇಲ್ಲದಿದ್ದರೆ ಅರ್ಧ-ವಾರ್ಷಿಕ ಹೋಲ್ಡಿಂಗ್ ಸ್ಟೇಟ್ಮೆಂಟ್
- ಡಿಮ್ಯಾಟ್ ಅಥವಾ ಎಂಎಫ್‌ನಲ್ಲಿ ಯಾವುದೇ ವಹಿವಾಟು ನಡೆದ ಸಂದರ್ಭದಲ್ಲಿ ಮಾಸಿಕ ಸ್ಟೇಟ್ಮೆಂಟ್.
- ಇಸಿಎಎಸ್ ಸೇವೆಯನ್ನು ಪಡೆಯಲು ನಿಮ್ಮ ಡಿಮ್ಯಾಟ್ ಖಾತೆ/ಎಂಎಫ್ ಪೋರ್ಟ್‌ಫೋಲಿಯೋಗಳಲ್ಲಿ ನಿಮ್ಮ ಇಮೇಲ್ ಐಡಿ ಮತ್ತು ಸಿಎಎಸ್ ಮೋಡ್ ಅನ್ನು ಅಪ್ ಡೇಟ್ ಮಾಡಿರಿ.

- ಪರ್ಮನೆಂಟ್ ಅಕೌಂಟ್ ನಂಬರ್ (ಪ್ಯಾನ್) ಆಧಾರದ ಮೇಲೆ ಸಿಎಎಸ್ ಒದಗಿಸಲಾಗುತ್ತದೆ. ಅನೇಕ ಹೋಲ್ಡಿಂಗ್‌ಗಳು ಇರುವ ಸಂದರ್ಭದಲ್ಲಿ, ಇದು 1 ನೇ ಹೋಲ್ಡರ್‌ನ ಪ್ಯಾನ್ ಮತ್ತು ಹೋಲ್ಡಿಂಗ್ ಪ್ಯಾಟರ್ನ್ ಆಧಾರದ ಮೇಲೆ ಇರುತ್ತದೆ.
- ಸಿಎಎಸ್ ಅನ್ನು ಡೀಫಾಲ್ಟ್ ಡೆಪಾಸಿಟರಿಯ (ಈ ಮೊದಲು ಡಿಮ್ಯಾಟ್ ಖಾತೆಯನ್ನು ತೆರೆದಿರುವ ಡೆಪಾಸಿಟರಿ) ಮೂಲಕ ಕಳುಹಿಸಲಾಗುತ್ತದೆ.
- ಇನ್ವೆಸ್ಟರ್‌ಗಳು 23 ವೈವಿಧ್ಯಮಯ ಭಾರತೀಯ ಭಾಷೆಗಳ ಪೈಕಿ ತಮ್ಮ ಆದ್ಯತೆಯ ಭಾಷೆಯಲ್ಲಿ ಇಸಿಎಎಸ್ ಪಡೆಯಬಹುದು.

ಸಿಡಿಎಸ್‌ಎಲ್‌ನ ಇಸಿಎಎಸ್ ಎಂಬುದು ಇಮೇಲ್ ಮೂಲಕ ಕಳುಹಿಸುವ ಸಂವಾದಾತ್ಮಕ ಸಿಎಎಸ್ ಸ್ಟೇಟ್‌ಮೆಂಟ್ ಆಗಿದ್ದು, ಇದನ್ನು ತ್ವರಿತವಾಗಿ ಪಡೆಯಬಹುದು, ಸಂಗ್ರಹಿಸಲು ಮತ್ತು ಹಿಂಪಡೆಯಲು ಸುಲಭವಾಗಿದ್ದು, ಪಾಸ್‌ವರ್ಡ್ ಸಂರಕ್ಷಿತ ಮತ್ತು ಪರಿಸರ-ಸ್ನೇಹಿ ಸೌಲಭ್ಯವಾಗಿದೆ. ಇಸಿಎಎಸ್‌ಗಾಗಿ ಈಗಲೇ ನಿಮ್ಮ ಡಿಪಿಯನ್ನು ಸಂಪರ್ಕಿಸಿ.

ಈಗಲೇ ನಿಮ್ಮ ಸಿಡಿಎಸ್‌ಎಲ್ ಸಿಎಎಸ್ ಡೌನ್ಲೋಡ್ ಮಾಡಿ:
https://www.cdslindia.com/CAS/LoginCAS.aspx

CDSL

INVESTOR PROTECTION FUND TRUST

# ಕುಂದುಕೊರತೆ ನಿವಾರಣೆ

ಸಿಡಿಎಸ್‌ಎಲ್‌ನ ಕುಂದುಕೊರತೆ ಪರಿಹಾರ ಸೌಲಭ್ಯವು ಇನ್ವೆಸ್ಟರ್‌ಗಳಿಗೆ ಸಹಾಯ ಪಡೆಯಲು ಮತ್ತು ತ್ವರಿತವಾಗಿ ಇನ್ವೆಸ್ಟರ್‌ಗಳ ಕುಂದುಕೊರತೆ ಪರಿಹರಿಸಲು ಅನುವು ಮಾಡಿಕೊಡುತ್ತದೆ.

ನಿಮ್ಮ ಕುಂದುಕೊರತೆಯ ವಿವರಗಳೊಂದಿಗೆ ನಿಮ್ಮ ಡಿಪಿ/ಇಶ್ಯೂವರ್ ಕಂಪನಿ/ಆರ್‌ಟಿಎ ಅನ್ನು ತಕ್ಷಣ ಸಂಪರ್ಕಿಸಿ.

ಒಂದು ವೇಳೆ ಕುಂದುಕೊರತೆ ಪರಿಹಾರ ಆಗದಿದ್ದರೆ, ನೀವು ಸಿಡಿಎಸ್‌ಎಲ್‌ನ ಕುಂದುಕೊರತೆ ಪರಿಹಾರ ಸೆಲ್ ಅನ್ನು ಸಂಪರ್ಕಿಸಬಹುದು. https://www.cdslindia.com/eservices/footer/grievances

ಇನ್ನೂ ತೃಪ್ತಿ ಆಗದಿದ್ದರೆ, ಸ್ಕೋರ್ಸ್-ಸೆಬಿ ದೂರು ಪರಿಹಾರ ವ್ಯವಸ್ಥೆಯಲ್ಲಿ ನಿಮ್ಮ ದೂರು ಸಲ್ಲಿಸಿ https://scores.sebi.gov.in/

ಡಿಪಿ ಅಥವಾ ಇತರೆ ಮಾರುಕಟ್ಟೆ ಭಾಗಿದಾರರು ಒದಗಿಸಿದ ಪರಿಹಾರದಿಂದ ಇನ್ವೆಸ್ಟರ್‌ಗೆ ತೃಪ್ತಿ ಆಗದಿದ್ದರೆ, ಆನ್‌ಲೈನ್ ಸಮಾಧಾನ ಅಥವಾ ಮಧ್ಯಸ್ಥಿಕೆಯ ಮೂಲಕ ದೂರು ಪರಿಹಾರಕ್ಕಾಗಿ SMARTODR ವೇದಿಕೆಯಲ್ಲಿ ದೂರು/ಕುಂದುಕೊರತೆಯನ್ನು ಸಲ್ಲಿಸುವ ಆಯ್ಕೆಯನ್ನು ಹೊಂದಿದ್ದಾರೆ. https://smartodr.in/login

ಒಪ್ಪಂದ, ಪತ್ರಗಳು, ಇಮೇಲ್‌ಗಳು, ಫ್ಯಾಕ್ಸ್‌ಗಳು ಮುಂತಾದ ನಿಮ್ಮ ಡಿಮ್ಯಾಟ್ ಖಾತೆ ಸಂಬಂಧಿತ ದಾಖಲೆಗಳ ಪ್ರತಿಗಳನ್ನು ಯಾವಾಗಲೂ ಇಟ್ಟುಕೊಳ್ಳಿ.

ಬೇಗ ಎಚ್ಚೆತ್ತುಕೊಳ್ಳಿ ಮತ್ತು ಕುಂದುಕೊರತೆಯ ಪರಿಹಾರಕ್ಕಾಗಿ ಸಂಬಂಧಿತ ಪ್ರಾಧಿಕಾರವನ್ನು ಸಂಪರ್ಕಿಸಿ.

CDSL

INVESTOR PROTECTION FUND TRUST

# ಹೂಡಿಕೆದಾರರ ಜಾಗೃತಿ

ಡೆಪಾಸಿಟರಿ, ಬಂಡವಾಳ ಮಾರುಕಟ್ಟೆ ಅಭ್ಯಾಸಗಳು ಹಾಗೂ ಇನ್ವೆಸ್ಟರ್‌ಗಳ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿಸುವ ಮೂಲಕ, ಸಿಡಿಎಸ್‌ಎಲ್ ಇನ್ವೆಸ್ಟರ್‌ಗೆ ಬೆಂಬಲ ನೀಡುತ್ತದೆ. ಇದಕ್ಕಾಗಿ, ಸಿಡಿಎಸ್‌ಎಲ್ ಆಗಾಗ್ಗೆ ತನ್ನ ಡಿಪಿಗಳು, ಎಕ್ಸ್‌ಚೇಂಜ್‌ಗಳು, ಹಣಕಾಸು/ಶೈಕ್ಷಣಿಕ ಸಂಸ್ಥೆಗಳು, ಮಾಧ್ಯಮ ಇತ್ಯಾದಿಗಳೊಂದಿಗೆ ಇನ್ವೆಸ್ಟರ್ ಜಾಗೃತಿ ಕಾರ್ಯಕ್ರಮ (ಐಎಪಿ) ಗಳನ್ನು ನಡೆಸುತ್ತದೆ.

FREE

ಈ ಐಎಪಿಗಳಿಗೆ ಎಲ್ಲರಿಗೂ ಉಚಿತ ಪ್ರವೇಶ ಇದೆ.

ಪ್ರಸ್ತುತ ಮತ್ತು ನಿರೀಕ್ಷಿತ ಇನ್ವೆಸ್ಟರ್‌ಗಳು ಈ ಸೆಮಿನಾರ್‌ಗಳಲ್ಲಿ ಭಾಗವಹಿಸಬಹುದು.

ಮೊದಲು ಬಂದವರಿಗೆ ಮೊದಲ ಆದ್ಯತೆಯ ಆಧಾರದಲ್ಲಿ ಪ್ರವೇಶ ನೀಡಲಾಗುತ್ತದೆ.

ಈ ಐಎಪಿಗಳಲ್ಲಿ ಬಂಡವಾಳ ಮಾರುಕಟ್ಟೆ ಮತ್ತು ಡಿಮ್ಯಾಟ್ ಬಗ್ಗೆ ಇನ್ನಷ್ಟು ತಿಳಿಯಿರಿ.

ನಿಮಗೆ ಸೂಕ್ತವಾದ ಐಎಪಿ ಆಯ್ಕೆ ಮಾಡಲು, ಐಎಪಿಗಳ ವಿಸ್ತೃತ ಪಟ್ಟಿಯನ್ನು ನೋಡಿ.

**ಐಎಪಿಗಳ ವೇಳಾಪಟ್ಟಿ**

https://www.cdslindia.com/eservices/Investors/InvestorCorner

ದಯವಿಟ್ಟು "ಸೆಕ್ಯೂರಿಟಿಗಳ ಮಾರುಕಟ್ಟೆ: ಇನ್ವೆಸ್ಟರ್ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳುವುದು" ಎಂಬ ಸೆಬಿ ಕಿರುಪುಸ್ತಕವನ್ನು ಡೌನ್ಲೋಡ್ ಮಾಡಿ

ಸೆಕ್ಯೂರಿಟಿಗಳ ಮಾರುಕಟ್ಟೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಕೆಳಗೆ ಕ್ಲಿಕ್ ಮಾಡಿ.

https://www.cdslindia.com/downloads/Securities%20Market%20Booklet.pdf

**ಈ ಕಿರುಪುಸ್ತಕವನ್ನು ಜಂಟಿಯಾಗಿ ರಚಿಸಿದವರು:**
https://www.cdslindia.com/eservices/Investors/InvestorCorner
ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ | ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ |
ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ | ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ | ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ |
ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್

CDSL
INVESTOR PROTECTION FUND TRUST

## ಸೋಶಿಯಲ್ ಮೀಡಿಯಾ ಉಪಸ್ಥಿತಿ

ಫೇಸ್‌ಬುಕ್, ಲಿಂಕ್ಡ್‌ಇನ್, ಎಕ್ಸ್, ಇನ್‌ಸ್ಟಾಗ್ರಾಮ್ ಮತ್ತು ಯೂಟ್ಯೂಬ್‌ನಂಥ ಸೋಶಿಯಲ್ ಮೀಡಿಯಾ ಸೈಟ್‌ಗಳಲ್ಲಿ ಸಿಡಿಎಸ್‌ಎಲ್ ಸಕ್ರಿಯವಾಗಿದ್ದು, ಅಲ್ಲಿ ಬಂಡವಾಳ ಮಾರುಕಟ್ಟೆಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸುತ್ತದೆ.

- https://www.facebook.com/cdslindia/
- https://www.linkedin.com/company/cdslindia/
- https://x.com/cdslindia/
- https://www.instagram.com/cdslindia/
- https://www.youtube.com/@CDSLIndiaLtd/featured

### 5 ಸುಲಭ ಸಲಹೆಗಳು

ಆಗಿರಿ #AtmanirbharInvestor

- ಹುಡುಕಿ ಮತ್ತು ನಿಮ್ಮ ಸ್ವಂತ ಸಂಶೋಧನೆ ಮಾಡಿ.
- ಕಲಿಯಿರಿ ಮತ್ತು ಅಪ್‌ಡೇಟ್ ಆಗಿರಿ.
- ಹೂಡಿಕೆ ಮಾಡುವ ಮೊದಲು ಅಪಾಯಗಳನ್ನು ಲೆಕ್ಕ ಹಾಕಿ ಮತ್ತು ಅರ್ಥಮಾಡಿಕೊಳ್ಳಿ.
- ತಾಳ್ಮೆ ಮತ್ತು ಗಮನ ತುಂಬಾ ಮುಖ್ಯ!
- ಸಿಡಿಎಸ್‌ಎಲ್‌ನ easi/ easiest ನಂಥ ಡಿಜಿಟಲ್ ಸೇವೆಗಳನ್ನು ಪಡೆಯಿರಿ ಮತ್ತು ಇನ್ವೆಸ್ಟರ್ ಜಾಗೃತಿ ಕಾರ್ಯಕ್ರಮ (ಐಎಪಿ) ಗಳಿಗೆ ಹಾಜರಾಗಿ.

INVESTOR PROTECTION FUND TRUST

# ನಮ್ಮನ್ನು ಸಂಪರ್ಕಿಸಿ

ನಾವು ಪ್ರತಿ ಆತ್ಮನಿರ್ಭರ್ ಇನ್ವೆಸ್ಟರ್‌ಗೆ ಮತ್ತು ರಾಷ್ಟ್ರದ ಬೆಳೆಯುತ್ತಿರುವ ಆರ್ಥಿಕತೆಗೆ ಸಮೃದ್ಧ ಭವಿಷ್ಯವನ್ನು ರಚಿಸಲು ಎದುರು ನೋಡುತ್ತಿದ್ದೇವೆ

## ಸಿಡಿಎಸ್‌ಎಲ್ ಪ್ರಾದೇಶಿಕ ಕಚೇರಿಗಳು

**ಅಹಮದಾಬಾದ್**
ಶ್ರೀ ಉತ್ಪಲ್ ಶಾ
203/204, ಅಭಿಶ್ರೀ ಅವೆನ್ಯೂ, 2 ನೇ ಮಹಡಿ, ನೆಹರು ನಗರ್ ಸರ್ಕಲ್ ಹತ್ತಿರ, ಎಸ್.ಎಂ. ರೋಡ್, ಅಂಬಾವಾಡಿ, ಅಹಮದಾಬಾದ್ - 380 015, ಗುಜರಾತ್.
ಇಮೇಲ್: utpals@cdslindia.com

**ಬೆಂಗಳೂರು**
ಶ್ರೀ ಸಿ.ಎಸ್. ಹರೀಶ
ಸಿ-02, 2 ನೇ ಮಹಡಿ, ಜೈನ್ ಹೈಟ್ಸ್ ಸೋಲಸ್ 1, ಜೆ ಸಿ ರಸ್ತೆ 1 ನೇ ಕ್ರಾಸ್, ಬೆಂಗಳೂರು - 560 027, ಕರ್ನಾಟಕ.
ಇಮೇಲ್: csharisha@cdslindia.com

**ಚೆನ್ನೈ**
ಶ್ರೀ ಕಾರ್ತಿಕ್ ಬಿ
ಬಿಎಸ್‌ಇ ಇನ್ವೆಸ್ಟರ್ ಸರ್ವಿಸ್ ಸೆಂಟರ್ "ಇಂಪೀರಿಯಲ್" ಎ - ಟವರ್ಸ್, 8 ನೇ ಮಹಡಿ 610, ಅಣ್ಣಾ ಸಾಲೈ, ತೇನಂಪೇಟ್, ತೇನಂಪೇಟ್ ಮೆಟ್ರೋ ಸ್ಟೇಷನ್ ಹತ್ತಿರ, ಚೆನ್ನೈ - 600 018
ಇಮೇಲ್: karthikb@cdslindia.com

**ಹೈದರಾಬಾದ್**
ಶ್ರೀ ಶಿವ ಪ್ರಸಾದ್ ವೆನಿಶೆಟ್ಟಿ
101, ಇಂಪೀರಿಯಲ್ ಟವರ್, ಅಮೀರ್‌ಪೇಟ್ ಮೆಟ್ರೋ ಸ್ಟೇಷನ್ ಎದುರು, ಅಮೀರ್‌ಪೇಟ್, ಹೈದರಾಬಾದ್ - 500 082, ಆಂಧ್ರಪ್ರದೇಶ.
ಇಮೇಲ್: shivap@cdslindia.com

**ಜೈಪುರ್**
ಶ್ರೀ ಯಶ್ವಂತ್ ಗುಪ್ತಾ
ಕಚೇರಿ ನಂಬರ್ 602, 6 ನೇ ಮಹಡಿ, ಕೆಜಿ ಸಿಟಿ ಟವರ್, ಅಶೋಕ್ ಮಾರ್ಗ್, ಸಿ-ಸ್ಕೀಮ್, ಜೈಪುರ - 302 001, ರಾಜಸ್ಥಾನ
ಇಮೇಲ್: yashwantg@cdslindia.com

**ಕೊಚ್ಚಿ**
ಶ್ರೀ ಶಿಬುನಾಥ್ ಟಿ.
ಬಿಎಸ್‌ಇ ಇನ್ವೆಸ್ಟರ್ಸ್ ಸರ್ವಿಸ್ ಸೆಂಟರ್, ಶ್ರೀ ಲಕ್ಷ್ಮೀ ಟವರ್, 2 ನೇ ಮಹಡಿ, ರವಿಪುರಂ ರಸ್ತೆ, ರವಿಪುರಂ, ಎರ್ನಾಕುಲಂ, ಕೇರಳ, ಪಿನ್ ಕೋಡ್ - 680 016
ಇಮೇಲ್: shibunatht@cdslindia.com

**ಕೋಲ್ಕತ್ತಾ**
ಶ್ರೀ ಮಲಯ್ ಬಿಸ್ವಾಸ್
ಯೂನಿಟ್ ನಂಬರ್ - ಎ1 (II) & ಎ1 (III), ಬ್ಲಾಕ್ - ಎ, 1 ನೇ ಮಹಡಿ, 22 ಕ್ಯಾಮಕ್ ಸ್ಟ್ರೀಟ್, (ಅಬನೀಂದ್ರನಾಥ್ ಠಾಕೂರ್ ಸಾರನಿ), ಕೋಲ್ಕತ್ತಾ - 700 016, ಪಶ್ಚಿಮ ಬಂಗಾಳ.
ಇಮೇಲ್: moloyb@cdslindia.com

**ಲುಧಿಯಾನಾ**
ಶ್ರೀ ಇಂದರ್ಜಿತ್ ಸಿಂಗ್
214, ಲುಧಿಯಾನ ಸ್ಟಾಕ್ ಎಕ್ಸ್‌ಚೇಂಜ್ ಬಿಲ್ಡಿಂಗ್, ಫಿರೋಜ್ ಗಾಂಧಿ ಮಾರುಕಟ್ಟೆ, ಲೂಧಿಯಾನ - 141 001, ಪಂಜಾಬ್.
ಇಮೇಲ್: inderjitp@cdslindia.com

**ನವ ದೆಹಲಿ**
ಶ್ರೀ ಅಮಿತ್‌ಕುಮಾರ್ ಜೈನ್
101, 1 ನೇ ಮಹಡಿ, ಅಗರ್ವಾಲ್ ಕಾರ್ಪೊರೇಟ್ ಟವರ್, ಪ್ಲಾಟ್ ನಂಬರ್ 23, ಜಿಲ್ಲಾ ಕೇಂದ್ರ, ರಾಜೇಂದ್ರ ಪ್ಲೇಸ್, ನವದೆಹಲಿ - 110 008.
ಇಮೇಲ್: amitj@cdslindia.com

**ಪುಣೆ**
ಮಿಸ್ ಅಶ್ವಿನಿ ಥೋರಟ್
ಕಚೇರಿ ನಂಬರ್ 15, 1 ನೇ ಮಹಡಿ, ಗ್ಲೋಬಲ್ ಟ್ರೇಡ್ ಸೆಂಟರ್, 1/1, ರಾಮ್‌ಬಾಗ್ ಕಾಲೋನಿ, (ಎಚ್‌ಡಿಎಫ್‌ಸಿ ಬ್ಯಾಂಕ್ ಮೇಲೆ), ಎಲ್.ಬಿ.ಎಸ್ ಮಾರ್ಗ್, ನವಿ ಪೇಟ್, ಪುಣೆ - 411 030, ಮಹಾರಾಷ್ಟ್ರ.
ಇಮೇಲ್: ashwinit@cdslindia.com

**ಕಾನ್ಪುರ್**
ಶ್ರೀ ದೇವೇಶ್ ಧರ್ ದುಬೇ
ಪದಮ್ ಟವರ್ಸ್-II, 14/113, ಕ್ಯಾಬಿನ್ ನಂಬರ್ 369, ಮೂರನೇ ಮಹಡಿ, ಸಿವಿಲ್ ಲೈನ್ಸ್, ಕಾನ್ಪುರ ನಗರ, ಕಾನ್ಪುರ - 208 001, ಉತ್ತರ ಪ್ರದೇಶ.
ಇಮೇಲ್: deveshd@cdslindia.com

**ಇಂದೋರ್**
ಶ್ರೀ ಕೃಷ್ಣ ಗುಪ್ತಾ
320, ರತ್ನಮಣಿ ಕಾಂಪ್ಲೆಕ್ಸ್, 7/1, ನ್ಯೂ ಪಲಾಸಿಯಾ, ಇಂದೋರ್ - 452 001, ಮಧ್ಯಪ್ರದೇಶ.
ಇಮೇಲ್: krishnag@cdslindia.com

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL

INVESTOR PROTECTION FUND TRUST

# ನಮ್ಮನ್ನು ಸಂಪರ್ಕಿಸಿ


ಸಿಐಎನ್: **L67120MH1997PLC112443**

**ನೋಂದಾಯಿತ ಕಚೇರಿ: ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್,**
ಎ-ವಿಂಗ್, ಮ್ಯಾರಥಾನ್ ಫ್ಯೂಚರೆಕ್ಸ್, 25 ನೇ ಮಹಡಿ, ಮಫತ್‌ಲಾಲ್ ಮಿಲ್ಸ್ ಕಾಂಪೌಂಡ್,
ಎನ್.ಎಂ. ಜೋಶಿ ಮಾರ್ಗ್, ಲೋವರ್ ಪರೇಲ್ (ಈಸ್ಟ್), ಮುಂಬೈ - 400 013

**ವೆಬ್‌ಸೈಟ್** - https://www.cdslindia.com/



ಹಕ್ಕು ನಿರಾಕರಣೆ: ಈ ಕಿರುಪುಸ್ತಕವು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಇದೆ ಮತ್ತು ಓದುಗ(ರು) ಅನುಸರಿಸಬೇಕಾದ ಯಾವುದೇ ಕ್ರಮದ ಬಗ್ಗೆ ಯಾವುದೇ ಅಭಿಪ್ರಾಯ ಅಥವಾ ಶಿಫಾರಸನ್ನು ರಚಿಸುವುದಿಲ್ಲ. ಈ ಕಿರುಪುಸ್ತಕದಲ್ಲಿ ಒಳಗೊಂಡಿರುವ ಮಾಹಿತಿಯು ಮಾರಾಟ ಅಥವಾ ಖರೀದಿ ಅಥವಾ ಸೇವೆಯ ಆಫರ್ ಅನ್ನು ರೂಪಿಸುವುದಿಲ್ಲ ಅಥವಾ ಅದರ ಭಾಗವಲ್ಲ ಅಥವಾ ಅದನ್ನು ಆ ರೀತಿಯಲ್ಲಿ ಪರಿಗಣಿಸಬಾರದು. ಈ ಕಿರುಪುಸ್ತಕದಲ್ಲಿನ ಮಾಹಿತಿಯನ್ನು ವಿಶ್ವಾಸಾರ್ಹ ಮತ್ತು ಉತ್ತಮ ನಂಬಿಕೆಯುಳ್ಳ ಮೂಲಗಳಿಂದ ಸಂಗ್ರಹಿಸಿದ್ದರೂ, ಪಠ್ಯ, ಗ್ರಾಫಿಕ್ಸ್, ಲಿಂಕ್‌ಗಳು ಅಥವಾ ಇತರ ಅಂಶಗಳನ್ನು ಒಳಗೊಂಡಂತೆ ಅದರ ವಿಷಯಗಳನ್ನು ಯಾವುದೇ ರೀತಿಯ ಖಾತರಿ ಇಲ್ಲದೇ ಒದಗಿಸಲಾಗುತ್ತದೆ ಎಂಬುದನ್ನು ಓದುಗರು ಗಮನಿಸಬಹುದು.

ಈ ಕಿರುಪುಸ್ತಕದ ನಿಖರತೆ, ಸತ್ಯತೆ, ವಿಶ್ವಾಸಾರ್ಹತೆ, ಸಮಯದ ಸೂಕ್ತತೆ, ವ್ಯಾಪಾರ ಸಾಮರ್ಥ್ಯ ಅಥವಾ ಯಾವುದೇ ನಿರ್ದಿಷ್ಟ ಉದ್ದೇಶದ ಸೂಕ್ತತೆಗೆ ಸಂಬಂಧಿಸಿದ ಯಾವುದೇ ಖಾತರಿಯನ್ನು ಸಿಡಿಎಸ್‌ಎಲ್ ಸ್ಪಷ್ಟವಾಗಿ ನಿರಾಕರಿಸುತ್ತದೆ. ಈ ಕಿರುಪುಸ್ತಕದಲ್ಲಿ ಇರುವ ಮಾಹಿತಿ ಅಥವಾ ಡೇಟಾದ ಬಳಕೆಯ ಪರಿಣಾಮವಾಗಿ (ನೇರ ಅಥವಾ ಪರೋಕ್ಷವಾಗಿ) ಉಂಟಾಗುವ ಯಾವುದೇ ರೀತಿಯ ಹಾನಿ ಅಥವಾ ನಷ್ಟಕ್ಕೆ ಸಿಡಿಎಸ್‌ಎಲ್ ಜವಾಬ್ದಾರಿ ಹೊರುವುದಿಲ್ಲ. ಸಿಡಿಎಸ್‌ಎಲ್‌ನ ಪೂರ್ವ ಅನುಮತಿ ಇಲ್ಲದೆ ಈ ನ್ಯೂಸ್‌ಲೆಟರ್‌ನ ಯಾವುದೇ ಭಾಗವನ್ನು ಅಥವಾ ಸಂಪೂರ್ಣ ನ್ಯೂಸ್‌ಲೆಟರ್ ಅನ್ನು ಮಾರ್ಪಾಡು, ಪ್ರಸರಣ, ನಕಲು ವಿತರಣೆ ಮಾಡುವುದನ್ನು ಅಥವಾ ಅದರ ಯಾವುದೇ ಸ್ವರೂಪದ ಅಥವಾ ಅದರ ಯಾವುದಾದರೂ ಭಾಗದ ಪುನರುತ್ಪಾದನೆಯನ್ನು ನಿಷೇಧಿಸಲಾಗಿದೆ.

CDSL

INVESTOR PROTECTION FUND TRUST

# ಆತ್ಮನಿರ್ಭರ್ ಇನ್ವೆಸ್ಟರ್‌ಗಳ ಸಬಲೀಕರಣ
# ಸಿಡಿಎಸ್‌ಎಲ್‌ನ

- ಅನುಕೂಲಕರ
- ವಿಶ್ವಾಸಾರ್ಹ
- ಸುರಕ್ಷಿತ

## ಡಿಮ್ಯಾಟ್ ಖಾತೆಗಳ ಜೊತೆಗೆ

ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್), ಎಂಬುದು ವಿಶ್ವಾಸಾರ್ಹ ಮತ್ತು ಸುರಕ್ಷಿತ ಡಿಜಿಟಲ್ ಸೇವೆಗಳೊಂದಿಗೆ ದೇಶಾದ್ಯಂತ ಇನ್ವೆಸ್ಟರ್‌ಗಳನ್ನು ಸಬಲೀಕರಣಗೊಳಿಸಲು ಮೀಸಲಾದ ಭಾರತದ ಮೊದಲ ಮತ್ತು ಏಕೈಕ ಪಟ್ಟಿ ಮಾಡಲಾದ ಡೆಪಾಸಿಟರಿ ಆಗಿದೆ



CDSL
INVESTOR PROTECTION FUND TRUST

# ಡಿಮ್ಯಾಟ್ ಡೆಬಿಟ್ ಮತ್ತು ಅಡಮಾನದ ಸೂಚನೆ (ಡಿಡಿಪಿಐ)

ಆಗಿರಿ #AtmanirbharInvestor



## ಮಾಡಬೇಕಾದ ಕೆಲಸಗಳು

- ನಿಮ್ಮ ಡಿಮ್ಯಾಟ್ ಖಾತೆಯನ್ನು ನಿರ್ವಹಿಸಲು ಪಿಒಎ ನೀಡುವ ಮುನ್ನ, ಅಧಿಕಾರಗಳ ಅಧಿಕಾರ ವ್ಯಾಪ್ತಿ ಮತ್ತು ಪರಿಣಾಮಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ.
- ಡಿಮ್ಯಾಟ್ ಖಾತೆ ತೆರೆಯಲು ಪಿಒಎ ಕಡ್ಡಾಯವಲ್ಲ.

## ಮಾಡಬಾರದ ಕೆಲಸಗಳು

- ನಿಮ್ಮ ಬ್ರೋಕರ್‌ಗೆ ಜನರಲ್ ಪಿಒಎ ನೀಡಬೇಡಿ. ಯಾವಾಗಲೂ ಸೀಮಿತ ಉದ್ದೇಶದ ಪಿಒಎ ಆಯ್ಕೆ ಮಾಡಿ.
- ಹಿಂಪಡೆಯಲಾಗದ ಪಿಒಎಗಳನ್ನು ನೀಡಬೇಡಿ. ನೀಡಲಾದ ಪಿಒಎಗಳನ್ನು ನಿರಾಕರಿಸಲು ಅಥವಾ ರದ್ದುಗೊಳಿಸಲು ಇದು ನಿಮಗೆ ಅಧಿಕಾರ ನೀಡುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**

CDSL
INVESTOR PROTECTION FUND TRUST

# ಆತ್ಮವಿಶ್ವಾಸಿ ಮತ್ತು ಆತ್ಮನಿರ್ಭರ್ ಇನ್ವೆಸ್ಟರ್‌ಗಳ ರಾಷ್ಟ್ರದ ನಿರ್ಮಾಣ

## ಆತ್ಮವಿಶ್ವಾಸಿ ಮತ್ತು ಆತ್ಮ-ನಿರ್ಭರ ಇನ್ವೆಸ್ಟರ್‌ಗಳ ರಾಷ್ಟ್ರವನ್ನು ನಿರ್ಮಿಸುವುದು

- ಡಿಮ್ಯಾಟ್ ಮತ್ತು ಎಂಎಫ್‌ನಲ್ಲಿ ಹೂಡಿಕೆಗಳ ಒಟ್ಟುಗೂಡಿಸಿದ ಚಿತ್ರಣ.
- ಡಿಮ್ಯಾಟ್ ಅಥವಾ ಎಂಎಫ್‌ನಲ್ಲಿ ಯಾವುದೇ ವಹಿವಾಟು ನಡೆದ ಸಂದರ್ಭದಲ್ಲಿ ಮಾಸಿಕ ಸ್ಟೇಟ್ಮೆಂಟ್.
- ಯಾವುದೇ ವಹಿವಾಟು ಇಲ್ಲದಿದ್ದರೆ ಅರ್ಧ-ವಾರ್ಷಿಕ ಹೋಲ್ಡಿಂಗ್ ಸ್ಟೇಟ್ಮೆಂಟ್.
- ಇಸಿಎಎಸ್ ಸೇವೆಯನ್ನು ಪಡೆಯಲು ನಿಮ್ಮ ಡಿಮ್ಯಾಟ್ ಖಾತೆ/ಎಂಎಫ್ ಪೋರ್ಟ್ ಫೋಲಿಯೋಗಳಲ್ಲಿ ನಿಮ್ಮ ಇಮೇಲ್ ಐಡಿ ಮತ್ತು ಸಿಎಎಸ್ ಮೋಡ್ ಅನ್ನು ಅಪ್‌ಡೇಟ್ ಮಾಡಿರಿ.

CDSL

INVESTOR PROTECTION FUND TRUST



**CDSL**
INVESTOR PROTECTION FUND TRUST

# ನಮ್ಮನ್ನು ಸಂಪರ್ಕಿಸಿ

ನಾವು ಪ್ರತಿ ಆತ್ಮನಿರ್ಭರ್ ಇನ್ವೆಸ್ಟರ್‌ಗೆ ಮತ್ತು ದೇಶದ ಬೆಳೆಯುತ್ತಿರುವ ಆರ್ಥಿಕತೆಗೆ ಸಮೃದ್ಧ ಭವಿಷ್ಯವನ್ನು ಸೃಷ್ಟಿಸಲು ಎದುರು ನೋಡುತ್ತಿದ್ದೇವೆ. 3 ಕೋಟಿ ಆತ್ಮನಿರ್ಭರ್ ಇನ್ವೆಸ್ಟರ್‌ಗಳ ಜೊತೆ ಸೇರಿಕೊಳ್ಳಿ

## ಸಿಡಿಎಸ್ಎಲ್ ಪ್ರಾದೇಶಿಕ ಕಚೇರಿಗಳು

**ಅಹಮದಾಬಾದ್**
ಶ್ರೀ ಉತ್ಪಲ್ ಶಾ
203/204, ಅಭಿಶ್ರೀ ಅವೆನ್ಯೂ, 2 ನೇ ಮಹಡಿ, ನೆಹರು ನಗರ್ ಸರ್ಕಲ್ ಹತ್ತಿರ, ಎಸ್.ಎಂ. ರೋಡ್, ಅಂಬಾವಾಡಿ, ಅಹಮದಾಬಾದ್ - 380 015, ಗುಜರಾತ್.
ಇಮೇಲ್: utpals@cdslindia.com

**ಬೆಂಗಳೂರು**
ಶ್ರೀ ಸಿ.ಎಸ್. ಹರೀಶ
ಸಿ-02, 2 ನೇ ಮಹಡಿ, ಜೈನ್ ಹೈಟ್ಸ್ ಸೋಲಸ್ 1, ಜೆ ಸಿ ರಸ್ತೆ 1 ನೇ ಕ್ರಾಸ್, ಬೆಂಗಳೂರು - 560 027, ಕರ್ನಾಟಕ.
ಇಮೇಲ್: csharisha@cdslindia.com

**ಚೆನ್ನೈ**
ಶ್ರೀ ಕಾರ್ತಿಕ್ ಬಿ
ಬಿಎಸ್ಇ ಇನ್ವೆಸ್ಟರ್ ಸರ್ವಿಸ್ ಸೆಂಟರ್ "ಇಂಪೀರಿಯಲ್" ಎ - ಟವರ್ಸ್, 8 ನೇ ಮಹಡಿ 610, ಅಣ್ಣಾ ಸಾಲೈ, ತೇನಂಪೇಟ್, ತೇನಂಪೇಟ್ ಮೆಟ್ರೋ ಸ್ಟೇಷನ್ ಹತ್ತಿರ, ಚೆನ್ನೈ - 600 018
ಇಮೇಲ್: karthikb@cdslindia.com

**ಹೈದರಾಬಾದ್**
ಶ್ರೀ ಶಿವ ಪ್ರಸಾದ್ ವೆನಿಶೆಟ್ಟಿ
101, ಇಂಪೀರಿಯಲ್ ಟವರ್, ಅಮೀರ್‌ಪೇಟ್ ಮೆಟ್ರೋ ಸ್ಟೇಷನ್ ಎದುರು, ಅಮೀರ್‌ಪೇಟ್, ಹೈದರಾಬಾದ್ - 500 082, ಆಂಧ್ರಪ್ರದೇಶ.
ಇಮೇಲ್: shivap@cdslindia.com

**ಜೈಪುರ್**
ಶ್ರೀ ಯಶ್ವಂತ್ ಗುಪ್ತಾ
ಕಚೇರಿ ನಂಬರ್ 602, 6 ನೇ ಮಹಡಿ, ಕೆಜೆ ಸಿಟಿ ಟವರ್, ಅಶೋಕ್ ಮಾರ್ಗ್, ಸಿ-ಸ್ಕೀಮ್, ಜೈಪುರ - 302 001, ರಾಜಸ್ಥಾನ
ಇಮೇಲ್: yashwantg@cdslindia.com

**ಕೊಚ್ಚಿ**
ಶ್ರೀ ಶಿಬುನಾಥ್ ಟಿ.
ಬಿಎಸ್ಇ ಇನ್ವೆಸ್ಟರ್ಸ್ ಸರ್ವಿಸ್ ಸೆಂಟರ್, ಶ್ರೀ ಲಕ್ಷ್ಮೀ ಟವರ್, 2 ನೇ ಮಹಡಿ, ರವಿಪುರಂ ರಸ್ತೆ, ರವಿಪುರಂ, ಎರ್ನಾಕುಲಂ, ಕೇರಳ, ಪಿನ್ ಕೋಡ್ - 680 016
ಇಮೇಲ್: shibunatht@cdslindia.com

**ಕೋಲ್ಕತ್ತಾ**
ಶ್ರೀ ಮಲಯ್ ಬಿಸ್ವಾಸ್
ಯೂನಿಟ್ ನಂಬರ್ - ಎ1 (II) & ಎ1 (III), ಬ್ಲಾಕ್ - ಎ, 1 ನೇ ಮಹಡಿ, 22 ಕ್ಯಾಮಕ್ ಸ್ಟ್ರೀಟ್, (ಅಬನೀಂದ್ರನಾಥ್ ಠಾಕೂರ್ ಸಾರನಿ), ಕೋಲ್ಕತ್ತಾ - 700 016, ಪಶ್ಚಿಮ ಬಂಗಾಳ.
ಇಮೇಲ್: moloyb@cdslindia.com

**ಲುಧಿಯಾನಾ**
ಶ್ರೀ ಇಂದರ್ಜಿತ್ ಸಿಂಗ್
214, ಲುಧಿಯಾನ ಸ್ಟಾಕ್ ಎಕ್ಸ್‌ಚೇಂಜ್ ಬಿಲ್ಡಿಂಗ್, ಫಿರೋಜ್ ಗಾಂಧಿ ಮಾರುಕಟ್ಟೆ, ಲೂಧಿಯಾನ - 141 001, ಪಂಜಾಬ್.
ಇಮೇಲ್: inderjitp@cdslindia.com

**ನವ ದೆಹಲಿ**
ಶ್ರೀ ಅಮಿತ್‌ಕುಮಾರ್ ಜೈನ್
101, 1 ನೇ ಮಹಡಿ, ಅಗರ್ವಾಲ್ ಕಾರ್ಪೊರೇಟ್ ಟವರ್, ಪ್ಲಾಟ್ ನಂಬರ್ 23, ಜಿಲ್ಲಾ ಕೇಂದ್ರ, ರಾಜೇಂದ್ರ ಪ್ಲೇಸ್, ನವದೆಹಲಿ - 110 008.
ಇಮೇಲ್: amitj@cdslindia.com

**ಪುಣೆ**
ಮಿಸ್ ಅಶ್ವಿನಿ ಥೋರಟ್
ಕಚೇರಿ ನಂಬರ್ 15, 1 ನೇ ಮಹಡಿ, ಗ್ಲೋಬಲ್ ಟ್ರೇಡ್ ಸೆಂಟರ್, 1/1, ರಾಮ್‌ಬಾಗ್ ಕಾಲೋನಿ, (ಎಚ್‌ಡಿಎಫ್‌ಸಿ ಬ್ಯಾಂಕ್ ಮೇಲೆ), ಎಲ್.ಬಿ.ಎಸ್ ಮಾರ್ಗ್, ನವಿ ಪೇಟ್, ಪುಣೆ - 411 030, ಮಹಾರಾಷ್ಟ್ರ.
ಇಮೇಲ್: ashwinit@cdslindia.com

**ಕಾನ್ಪುರ್**
ಶ್ರೀ ದೇವೇಶ್ ಧರ್ ದುಬೇ
ಪದಮ್ ಟವರ್ಸ್-II, 14/113, ಕ್ಯಾಬಿನ್ ನಂಬರ್ 369, ಮೂರನೇ ಮಹಡಿ, ಸಿವಿಲ್ ಲೈನ್ಸ್, ಕಾನ್ಪುರ ನಗರ, ಕಾನ್ಪುರ - 208 001, ಉತ್ತರ ಪ್ರದೇಶ.
ಇಮೇಲ್: deveshd@cdslindia.com

**ಇಂದೋರ್**
ಶ್ರೀ ಕೃಷ್ಣ ಗುಪ್ತಾ
320, ರತ್ನಮಣಿ ಕಾಂಪ್ಲೆಕ್ಸ್, 7/1, ನ್ಯೂ ಪಲಾಸಿಯಾ, ಇಂದೋರ್ - 452 001, ಮಧ್ಯಪ್ರದೇಶ.
ಇಮೇಲ್: krishnag@cdslindia.com

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **www.cdslindia.com**